ಸೆಲೆಬ್ರಿಟಿ

■ ಹನಿ

## ಮತ್ತೆ ತಸ್ಲೀಮಾ

ಕಥೆ, ಕಾವ್ಯ, ಅಂಕಣ, ಲೇಖನ, ಕಾದಂಬರಿ, ಜೀವನ ಚರಿತ್ರೆ– ಹೀಗೆ 30ಕ್ಕೂ ಹೆಚ್ಚು ಕೃತಿಗಳನ್ನು ಹೊರ ತಂದಿರುವ ತಸ್ಲೀಮಾ ನಸ್ರೀನ್ ಕೆಲವು ವರ್ಷಗಳ ಬಿಡುವಿನ ಬಳಿಕ ಮತ್ತೆ ಸುದ್ದಿಯ ಕೇಂದ್ರವಾಗಿದ್ದಾರೆ. ಕೋಲ್ಕತ್ತಾದ ಸಾಹಿತ್ಯ ಉತ್ಸವದಲ್ಲಿ ಆಕೆಯ ಜೀವನ ಚರಿತ್ರೆಯ ಏಳನೇ ಭಾಗವನ್ನು ಬಿಡುಗಡೆ ಮಾಡಲು ಹೊರಟ ಸಾಹಿತಿಗಳಿಗೆ ಉತ್ಸವದ ಸಂಘಟಕರು ಅವಕಾಶ ನಿರಾಕರಿಸಿದ್ದು ಪ್ರತಿಭಟನೆಗೆ ಕಾರಣವಾಗಿದೆ. ಸಭಾಂಗಣದ ಹೊರಗೆ ನಿಂತು ಪುಸ್ತಕ ಬಿಡುಗಡೆ ಮಾಡಿದ ಸಾಹಿತಿಗಳು ಆ ಪುಸ್ತಕದ ಕೆಲವು ಭಾಗಗಳನ್ನೂ ಓದಿದ್ದಾರೆ. ಸಲ್ಮಾನ್ ರಶ್ದಿಗೆ ಜೈಪುರ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸದಂತೆ ಸರಕಾರ ಮತ್ತು ಸಂಘಟಕರು ಸಂಚು ಹೂಡಿ ಯಶಸ್ವಿಯಾದ ಬೆನ್ನಲ್ಲೇ ತಸ್ಲೀಮಾ ಪ್ರಕರಣ ನಡೆದಿದೆ. ಆದರೆ ವಿರೋಧಿಗಳ ಹಲ್ಲೆಯ ಭೀತಿಯಿಂದಾಗಿ ಗುಪ್ತಸ್ಥಳದಲ್ಲಿ ವಾಸವಾಗಿರುವ ತಸ್ಲೀಮಾ ಕೋಲ್ಕತ್ತಾ ಸಮ್ಮೇಳನದಲ್ಲಿ ಪಾಲ್ಗೊಂಡಿರಲಿಲ್ಲ. ಆಕೆಯ ಸಮಾನ ಮನಸ್ಕ ಲೇಖಕರು ಮತ್ತು ಓದುಗ ಅಭಿಮಾನಿಗಳಷ್ಟೇ ಕೋಲ್ಕತ್ತಾದಲ್ಲಿ ಪುಸ್ತಕ ಬಿಡುಗಡೆಗೆ ಸೇರಿದ್ದರು. 'ಸಮ್ಮೇಳನದ ಕೊನೆಯ ದಿನವಾದ್ದರಿಂದ ಸಭಾಂಗಣ ಮತ್ತು ವೇದಿಕೆಯನ್ನು ಬಿಚ್ಚತೊಡಗಿದ್ದೆವು. ಅಲ್ಲಿ ಅವ್ಯವಸ್ಥೆ ಇದ್ದುದರಿಂದ ಪುಸ್ತಕ ಬಿಡುಗಡೆಗೆ ಅವಕಾಶ ನೀಡಲು ಆಗಲಿಲ್ಲ' ಎಂದು ಸಂಘಟಕರು ಹೇಳಿರುವುದು ಮಾತ್ರ ತಮಾಷೆಯೆಂಬಂತೆ ಕಾಣಿಸುತ್ತಿದೆ.



ಬಾಂಗ್ಲಾದ ಈ ಬಂಗಾಳಿ ಲೇಖಕಿ ವಿವಾದ ಹುಟ್ಟುಹಾಕುತ್ತಿರುವುದು ಇದೇ ಮೊದಲಲ್ಲ; ಬಹುಶಃ ಕೊನೆಯೂ ಅಲ್ಲ. 13ರ ಹರೆಯದಲ್ಲೇ ಕವಿತೆ ಬರೆಯಲು ಶುರು ಮಾಡಿದ ತಸ್ಲೀಮಾ (ಬರ್ತ್‌ಡೇ 2-11-1965) 80ರ ದಶಕದವರೆಗೆ ಬರೆದದ್ದು ಅಷ್ಟು ಸುದ್ದಿಯಾಗಲಿಲ್ಲ. 2000 ಇಸವಿಯ ವೇಳೆಗೆ ತಸ್ಲೀಮಾರ ಉಗ್ರ ಸ್ತ್ರೀವಾದಿ ಭಾಷಣಗಳು ಹಾಗೂ ಧರ್ಮವಿರೋಧಿ ಹೇಳಿಕೆಗಳು ಗಮನ ಸೆಳೆದವು. ಸಂಪ್ರದಾಯಸ್ಥರಿಂದ ಅವುಗಳಿಗೆ ಪ್ರತಿಭಟನೆಯೂ ಹೆಚ್ಚಿ, ಸರಕಾರಗಳು ಆಕೆಯ ಪುಸ್ತಕಗಳನ್ನು ನಿಷೇಧಿಸುವುದಕ್ಕೆ ಕಾರಣವಾದವು. ವೈದ್ಯೆಯಾಗಿ ಬಳಿಕ ಲೇಖಕಿಯಾದ ತಸ್ಲೀಮಾ, ಹೆಣ್ಣಿನ ಮೇಲಿನ ದೌರ್ಜನ್ಯಗಳ ಬಗ್ಗೆ ಕಟು ಪ್ರತಿಕ್ರಿಯೆಗಳನ್ನು ನೀಡತೊಡಗಿದರು. ಬಾಂಗ್ಲಾದೇಶದಿಂದ 1994ರಲ್ಲಿ ದೇಶಭ್ರಷ್ಟಗೊಂಡಾಗ ಕೋಲ್ಕತ್ತಾ ಆಶ್ರಯ ನೀಡಿತು. ಆದರೆ ಕೋಲ್ಕತ್ತಾದಲ್ಲೂ ವಿವಾದ ಮೈಮೇಲೆ ಬಂದಾಗ ಗುಪ್ತವಾಗಿ ಪೊಲೀಸ್ ಕಾವಲಿನಲ್ಲಿ ದೆಹಲಿಗೆ ಬಂದು ಈಗಲೂ ಅಡಗಿ ಕುಳಿತುಕೊಳ್ಳುವ ಪರಿಸ್ಥಿತಿ ಇದೆ.

ಜಗತ್ತಿನ 20 ಭಾಷೆಗಳಿಗೆ ಈಕೆಯ ಕೃತಿಗಳು ಅನುವಾದಗೊಂಡಿವೆ. ಲೇಖಕಿಯಾಗಿ ಯಶಸ್ವಿ ಎನ್ನಿಸಿರುವ ತಸ್ಲೀಮಾಗೆ ಕೌಟುಂಬಿಕ ಬಾಳಿನಲ್ಲಿ ಅಂತಹ ಯಶಸ್ಸು ಲಭಿಸಲಿಲ್ಲ. 1982ರಲ್ಲಿ ಕವಿ ರುದ್ರ ಮೊಹಮ್ಮದ್ ಶಹೀದುಲ್ಲಾ ಜತೆ ಮನೆ ಬಿಟ್ಟು ಓಡಿಹೋಗಿ ಮದುವೆಯಾದ ತಸ್ಲೀಮಾ 86ರಲ್ಲಿ ವಿಚ್ಛೇದನ ಪಡೆದರು. ಆ ಬಳಿಕ ಪತ್ರಕರ್ತ ನಯೀಮುಲ್ ಇಸ್ಲಾಂ ಖಾನ್‌ಜತೆ ನಡೆದ ಮದುವೆಯೂ 91ರಲ್ಲಿ ಮುರಿದುಬಿತ್ತು. ಅದೇ ವರ್ಷ ಪತ್ರಕರ್ತ ಮೈನರ್ ಮಹಮೂದ್ ಜತೆ ಮೂರನೆ ಮದುವೆಯಾದ ತಸ್ಲೀಮಾ ಮರುವರ್ಷವೇ ಮತ್ತೆ ವಿಚ್ಛೇದನ ಪಡೆದರು. ಈಗಂತೂ ಒಂಟಿಯಾಗಿಯೇ ಎಲ್ಲ ಕಷ್ಟಗಳನ್ನು ಎದುರಿಸಬೇಕಿದೆ. ಆದರೆ ಸ್ತ್ರೀವಾದಿ ಹೋರಾಟಕ್ಕೆ ಸಿಗುತ್ತಿರುವ ಜಾಗತಿಕ ಪುರಸ್ಕಾರಗಳು ಈಕೆಯ ಹೋರಾಟದ ಮನೋಭಾವವನ್ನು ದೃಢಗೊಳಿಸಿವೆ.




## ಶಾರೂಕ್‌ಗೆ ಏನಾಗಿದೆ?

ಯಶಸ್ಸಿನ ತುತ್ತ ತುದಿಗೇರಿದ ನಂತರ, ತಾರೆಯಾದವರಿಗೆ ಬಹುಶಃ ಕೆಳಗೊಮ್ಮೆ ಜಾರಿ ನೋಡುವ ಬಯಕೆಯಾಗುತ್ತದೋ ಏನೋ? 44ರ ಹರೆಯದ ಶಾರೂಕ್ ಖಾನ್ ಬಾಲಿವುಡ್‌ನಲ್ಲಿ ಏರಿದ ಎತ್ತರ ಮತ್ತು ವೇಗ ಗಮನಾರ್ಹವಾದದ್ದು. ಆದರೆ ಎತ್ತರದಲ್ಲಿ ನಿಂತಿರುವ ಆತನ ಇತ್ತೀಚೆಗಿನ ನಡವಳಿಕೆ, ಮಾತುಗಳು ಎಲ್ಲವೂ ವ್ಯಕ್ತಿತ್ವದ ಅಹಂಕಾರವನ್ನಷ್ಟೇ ಎತ್ತಿ ತೋರಿಸುವಂತಿವೆ. ಇವತ್ತಿಗೂ ಸಿನಿಮಾ ಪ್ರಶಸ್ತಿ ಪ್ರದಾನ ಸಮಾರಂಭಗಳಲ್ಲಿ ನಿರೂಪಕನಾಗಿ ಶಾರೂಕ್‌ನನ್ನು ಮೀರಿಸುವವರಿಲ್ಲ. ತೆರೆಯ ಮೇಲಿನಂತೆ ಅಲ್ಲೂ ಆತ ಯಶಸ್ವಿ ಷೋಮ್ಯಾನ್. ಆದರೆ ಅನೇಕ ಸಲ ಆತನಾಡುವ ವ್ಯಂಗ್ಯಭರಿತ ಮಾತುಗಳಿಂದ ಇತರರಿಗೆ ನೋವಾಗಿ ಸಂಬಂಧಗಳೇ ಕೆಟ್ಟುಹೋದದ್ದಿದೆ. ಎದುರಾಳಿಗಳ ಕಣ್ಣಿಗೆ ಬೆರಳು ತೂರಿಸುವಂತೆ ಮಾತನಾಡುವ ಶಾರೂಕ್ ವ್ಯಕ್ತಿತ್ವಕ್ಕೆ ಕಪ್ಪು ಚುಕ್ಕೆ ಇಟ್ಟಿದೆ.

ಕಳೆದ ವಾರ 'ಅಗ್ನಿಪಥ್' ಚಿತ್ರದ ಯಶಸ್ಸಿನ ಹಿನ್ನೆಲೆಯಲ್ಲಿ ಸಂಜಯ್ ದತ್ ನೀಡಿದ ಪಾರ್ಟಿಯಲ್ಲಿ ನಡೆದದ್ದೂ ಇದನ್ನೇ ಸೂಚಿಸುತ್ತದೆ. ಫರ್ಹಾ ಖಾನ್‌ಳ ಗಂಡ ಶಿರೀಸ್ ಕುಂದರ್‌ನನ್ನು ಹಿಡಿದು ಕಪಾಳಕ್ಕೆ ಬಾರಿಸಿದ ಶಾರೂಕ್ ಹಿಗ್ಗಾಮುಗ್ಗಾ ಥಳಿಸಿದ್ದು ದೊಡ್ಡ ಸುದ್ದಿಯಾಯಿತು. ಪಾಪ, ಫರ್ಹಾ ಖಾನ್ ಸಾಜಿದ್ ಮೂಲಕ ಶಾರೂಕ್ ಮನೆಗೇ ಹೋಗಿ ರಾಜಿ ಮಾಡಿಕೊಂಡಳು. ಸೂಪರ್ ಸ್ಟಾರ್‌ನನ್ನು ಎದುರು ಹಾಕಿಕೊಳ್ಳುವಷ್ಟು ತಾಖತ್ತು ಆಕೆಯ ಬಳಿ ಇರಲಿಲ್ಲ ಎನ್ನುವುದೂ ನಿಜವೇ. ಆದರೆ ಈ ಘಟನೆಯ ಬಗ್ಗೆ ಶಾರೂಕ್ ನೀಡಿರುವ ಪ್ರತಿಕ್ರಿಯೆಯೂ ಆತನ ಹೆಸರಿಗೆ ಅಂಟಿದ ಕಳಂಕವನ್ನು ತೊಡೆಯುವಂತೆ ಇರಲಿಲ್ಲ. 'ನನ್ನ ವೈಯಕ್ತಿಕ ವಿಷಯಗಳ ಬಗ್ಗೆ ಬಹಿರಂಗವಾಗಿ ಏನನ್ನೂ ಹೇಳಲ್ಲ' ಎನ್ನುವುದು ಶಾರೂಕ್ ಪ್ರತಿಕ್ರಿಯೆ!

ಶಾರೂಕ್ ಸಂಸಾರದ ಬಗ್ಗೆಯೂ ಒಡಕು ಮಾತುಗಳು ಕೇಳಿಬರುತ್ತಿವೆ. ಪ್ರಿಯಾಂಕಾ ಚೋಪ್ರಾ ಜತೆಗೆ ಶಾರೂಕ್ ನಿಕಟ ಸ್ನೇಹದ ಕುರಿತು ಪತ್ನಿ ಗೌರಿ ಖಾನ್ ಈಗಾಗಲೆ ಜಗಳ ಕಾದಿದ್ದಾಳಂತೆ. ರೆಡ್ ಚಿಲ್ಲೀಸ್ ಎಂಟರ್‌ಟೈನ್‌ಮೆಂಟ್‌ಗೆ ಪಾಲುದಾರಳಾದ ಗೆಳತಿ ಜೂಹಿ ಚಾವ್ಲಾ ಬಗ್ಗೆಯೂ ಲಘುವಾದ ಕಾಮೆಂಟ್ ಮಾಡಿದ ಶಾರೂಕ್ ಆಕೆಯ ಜತೆಗೂ ಸಂಬಂಧ ಕೆಡಿಸಿಕೊಂಡಿದ್ದಾನಂತೆ. 70 ಸಿನಿಮಾಗಳಲ್ಲಿ ನಟಿಸಿ ಎಲ್ಲರಿಗಿಂತ ಹೆಚ್ಚು ಅತ್ಯುತ್ತಮ ನಟನೆಯ ಫಿಲಂಫೇರ್ ಪ್ರಶಸ್ತಿಗಳನ್ನು (8) ಗೆದ್ದುಕೊಂಡಿರುವ ಶಾರೂಕ್ 2005ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನೂ ಪಡೆದ. ಆತನ 11 ಸಿನಿಮಾಗಳು ತಲಾ 100 ಕೋಟಿ ರೂಪಾಯಿ ಕಲೆಕ್ಷನ್ ದಾಟಿ ದಾಖಲೆ ನಿರ್ಮಿಸಿವೆ. ಖ್ಯಾತಿಯ ಈ ಉತ್ತುಂಗದಲ್ಲಿ ವ್ಯಕ್ತಿ ಇನ್ನಷ್ಟು ವಿನಯವಂತನಾದರೆ ಒಳ್ಳೆಯದಲ್ಲವೆ?


Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.

Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008,


©All rights reserved. Reproduction in whole or in part without permission is prohibited.


RNI No 7891/65